ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಅ) 1995-96ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ಹಣ ಬಿಡುಗಡೆಯಾಗಿರುವುದಿಲ್ಲ. 1996-97ನೇ ಸಾಲಿನಲ್ಲಿ ಮಂಜೂರಾದ ಸಾಲ ಸಹಾಯ 122.00 ಕೋಟಿ ರೂ.ಗಳು. 1997-98ನೇ ಸಾಲಿಗೆ ನಬಾರ್ಡ್‌ನವರು ಸಾಲ ಸಹಾಯ ಧನ ನಿಗಧಿಪಡಿಸಿರುವುದಿಲ್ಲ.

ಆ) ಅಂದಾಜಿನ ಶೇ. 10 ರಷ್ಟು ರಾಜ್ಯವು ಭರಿಸಬೇಕಾಗುತ್ತದೆ. ಪ್ರಸ್ತಾವಿತ ಕಾಮಗಾರಿಗಳು ಗ್ರಾಮೀಣ ಅಭಿವೃದ್ಧಿಯ ಹಿನ್ನೆಲೆ ಇರಬೇಕು. ಇದುವರೆವಿಗೂ ಹಣ ನಿಯೋಗಿಸಿರುವುದಿಲ್ಲ.

ಇ) ಜಿಲ್ಲಾವಾರು ನಿಯೋಜಿಸಿದ ಕಾಮಗಾರಿಗಳ ಮೊತ್ತ.

1) ಬೆಂಗಳೂರು	- 736.16	11) ಕೊಡಗು	- 728.00
2) ಕೋಲಾರ	- 731.79	12) ಬೆಳಗಾಂ	- 840.00
3) ತುಮಕೂರು	- 511.25	13) ಬಿಜಾಪುರ	- 741.98
4) ಚಿತ್ರದುರ್ಗ	- 859.34	14) ಧಾರವಾಡ	- 1150.69
5) ಶಿವಮೊಗ್ಗ	- 729.19	15) ಉ. ಕನ್ನಡ	- 332.45
6) ಮೈಸೂರು	- 1007.12	16) ಗುಲ್ಬರ್ಗಾ	- 422.61
7) ಮಂಡ್ಯ	- 769.12	17) ರಾಯಚೂರು	- 963.85
8) ಹಾಸನ	- 1182.12	18) ಬೀದರ್	- 295.00
9) ಚಿಕ್ಕಮಗಳೂರು	- 381.33	19) ಬಳ್ಳಾರಿ	- 490.34
10) ದ.ಕನ್ನಡ	- 506.77		

ಯಾವುದೇ ವೆಚ್ಚವಾಗಿರುವುದಿಲ್ಲ.

ಈ) ಅವಶ್ಯಕತೆಯ ಆಧಾರದ ಮೇಲೆ ಆದ್ಯತೆ ಸಮಿತಿಯ ತೀರ್ಮಾನದಂತೆ ಕಾಮಗಾರಿಗಳನ್ನು ಪ್ರಸ್ತಾವಿಸಿದೆ.

1996-97ನೇ ಸಾಲಿನಲ್ಲಿ ಶಾಸಕರ ಅನುದಾನದಲ್ಲಿ ಶಿಫಾರಸ್ಸು ಮಾಡಿದ ಕಾಮಗಾರಿಗಳು.

1038 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ಶಾಸಕರ ಅನುದಾನದಲ್ಲಿ ಶಿಫಾರಸ್ಸು ಮಾಡಿದ ಕಾಮಗಾರಿಗಳು*

ಆ) *ಪ್ರಾರಂಭ ಮಾಡಿದಲ್ಲಿ ಯಾವ ಯಾವ ಯಾವ ಕ್ಷೇತ್ರಗಳಲ್ಲಿ ಪ್ರಾರಂಭಿಸಲಾಗಿದೆ.*

ಇ) ಪ್ರಾರಂಭ ಮಾಡಿದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಈ) ಹಾಗಿಲ್ಲದಿದ್ದಲ್ಲಿ ಮಾಡದೇ ಇರುವುದಕ್ಕೆ ಕಾರಣಗಳೇನು?

ಉ) ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) 1996-97ನೇ ಸಾಲಿನ ಆಯವ್ಯದಲ್ಲಿರುವ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾರಂಭಿಸಲಾಗಿದೆ.

ಇ) 1996-97ನೇ ಸಾಲಿಗೆ 2090.00 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆಯ ಬೀಳಗಿ ಮತಕ್ಷೇತ್ರದಲ್ಲಿ ಹೊಸರಂಗಮಂದಿರ ನಿರ್ಮಾಣ.

1039 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ರಂಗ ಮಂದಿರಗಳನ್ನು ಹೊಸದಾಗಿ ನಿರ್ಮಿಸಲು ಮಂಜೂರು ಮಾಡಲಾಗಿದೆ (ತಾಲ್ಲೂಕವಾರು ಮಾಹಿತಿ ಒದಗಿಸುವುದು)

ಆ) ಹಾಗಾದಲ್ಲಿ ಯಾವಾಗ ಮಂಜೂರು ಮಾಡಲಾಗುವುದು.

ಇ) ಕಳೆದ ಒಂದೂವರೆ ವರ್ಷದಿಂದ ಬೀಳಗಿ ಮತ ಕ್ಷೇತ್ರದಲ್ಲಿ ರಂಗಮಂದಿರಗಳ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ 1997-98ನೇ ಸಾಲಿನಲ್ಲಿ ಮಂಜೂರು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) 23 ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಆ) 'ಅ' ಕ್ಕೆ ನೀಡಿರುವ ಉತ್ತರದಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹೌದು. ಪರಿಶೀಲಿಸಲಾಗುವುದು.